# ಮಂಗಳೂರು ವಿಶ್ವವಿದ್ಯಾನಿಲಯ

**ದಿನಾಂಕ 15.11.2024ರಂದು ಪೂರ್ವಾಹ್ನ ಗಂಟೆ 10.30ಕ್ಕೆ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2024ನೇ ಸಾಲಿನ ಚತುರ್ಥ ವಿಶೇಷ ಸಭೆಯ ನಡವಳಿಗಳು.**

## ಉಪಸ್ಥಿತರು:

| ಕ್ರ.ಸಂ | | | |
|---|---|---|---|
| 1. | ಪ್ರೊ. ಪಿ.ಎಲ್. ಧರ್ಮ<br>ಕುಲಪತಿಗಳು | ಅಧ್ಯಕ್ಷರು | |
| 2. | ಡಾ ರಾಮೇಗೌಡ ಎಂ.<br>ಜಂಟಿ ನಿರ್ದೇಶಕರು (ಕಾಲೇಜು ಶಿಕ್ಷಣ ಆಯುಕ್ತರ ಪರವಾಗಿ) | ಸದಸ್ಯರು | |
| 3. | ಪ್ರೊ ಎಂ ಜಯಶಂಕರ್<br>ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ | ಸದಸ್ಯರು | |
| 4. | ಡಾ ಎಸ್.ಬಿ.ಎಂ. ಪ್ರಸನ್ನ | ಸದಸ್ಯರು | |
| 5. | ಡಾ ಕೆ.ಸಿ. ಮಹದೇಶ | ಸದಸ್ಯರು | |
| 6. | ಡಾ. ಶಂಕರಮೂರ್ತಿ ಎಚ್.ಕೆ. | ಸದಸ್ಯರು | |
| 7. | ಡಾ ವರದರಾಜ ಸಿ. ಎಚ್. | ಸದಸ್ಯರು | |
| 8. | ಶ್ರೀ ಸುರೇಶ್ ಕುಮಾರ್ ಬಿ. ನಾವೂರು | ಸದಸ್ಯರು | |
| 9. | ಶ್ರೀ. ಸಿ.ಎ. ನಿತಿನ್ ಜೆ. ಶೆಟ್ಟಿ | ಸದಸ್ಯರು | |
| 10. | ಶ್ರೀಮತಿ ಜೂಡಿತ್ ಮೆಂಡೋನ್ಸ | ಸದಸ್ಯರು | |
| 11. | ಶ್ರೀ ರಘುರಾಜ್ | ಸದಸ್ಯರು | |
| 12. | ಶ್ರೀ ಅಚ್ಯುತ ಗಟ್ಟಿ | ಸದಸ್ಯರು | |
| 13. | ಶ್ರೀ ಮಹಮ್ಮದ್ ಸವಾದ್ | ಸದಸ್ಯರು | ವೀಡಿಯೋ ಕಾನ್ಫರೆನ್ಸ್ ಮೂಲಕ |
| 14. | ಡಾ. ಸಂದೇಶ್ ಎಸ್.<br>(ವೈದ್ಯಕೀಯ ಶಿಕ್ಷಣ ನಿರ್ದೇಶಕರ ಪರವಾಗಿ) | ಸದಸ್ಯರು | ವೀಡಿಯೋ ಕಾನ್ಫರೆನ್ಸ್ ಮೂಲಕ |
| 15. | ಪ್ರೊ ಹೆಚ್. ದೇವೇಂದ್ರಪ್ಪ<br>ಕುಲಸಚಿವರು (ಪರೀಕ್ಷಾಂಗ) | ಸದಸ್ಯರು | |
| 16. | ಪ್ರೊ. ಸಂಗಪ್ಪ ವೈ.<br>ಹಣಕಾಸು ಅಧಿಕಾರಿ (ಪ್ರಭಾರ) | ವಿಶೇಷ ಆಹ್ವಾನಿತರು | |
| 17. | ಶ್ರೀ ಕೆ. ರಾಜು ಮೊಗವೀರ, ಕೆ.ಎ.ಎಸ್.<br>ಕುಲಸಚಿವರು (ಆಡಳಿತ) | ಸದಸ್ಯ ಕಾರ್ಯದರ್ಶಿ | |

## ಪ್ರಾರಂಭಿಕ

**ಪ್ರಾರಂಭದಲ್ಲಿ ಕುಲಸಚಿವರು ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳನ್ನು ಹಾಗೂ ಎಲ್ಲಾ ಸಿಂಡಿಕೇಟು ಸದಸ್ಯರುಗಳನ್ನು ಸಭೆಗೆ ವಿಶೇಷ ಸಭೆಗೆ ಸ್ವಾಗತಿಸಿದರು. ಮಾನ್ಯ ಕುಲಪತಿಗಳು ಮತ್ತೊಮ್ಮೆ ಎಲ್ಲಾ ಸಿಂಡಿಕೇಟು ಸದಸ್ಯರನ್ನು ಸ್ವಾಗತಿಸುತ್ತಾ ಸಭೆಯನ್ನು ಪ್ರಾರಂಭಿಸಿದರು.**

## I. ನಡವಳಿಗಳ ದೃಢೀಕರಣ

ದಿನಾಂಕ 29.10.2024 ರಂದು ನಡೆದ ಸಿಂಡಿಕೇಟಿನ 2024ನೇ ಸಾಲಿನ ಆರನೇ ಸಾಮಾನ್ಯ ಸಭೆಯ ನಡವಳಿಯ ದೃಢೀಕರಣ.

**ಮುಂದಿನ ಸಿಂಡಿಕೇಟು ಸಭೆಯಲ್ಲಿ ದೃಢೀಕರಿಸಲು ನಿರ್ಣಯಿಸಲಾಯಿತು.**

## II. ಈ ಸಿಂಡಿಕೇಟು ಸಭೆಗೆ ಮಂಡಿಸಲಿರುವ ಕಾರ್ಯಸೂಚಿಗಳು.

ಕಾರ್ಯಸೂಚಿ ಸಂಖ್ಯೆ: ಹಣಕಾಸು:ವಿ.ಸ.4:1 (2024)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಪ್ರಸ್ತುತ ಆರ್ಥಿಕ ಸ್ಥಿತಿಗತಿ ಹಾಗೂ ಇತರ ಹಣಕಾಸಿಗೆ ಸಂಬಂಧಿಸಿದ ವಿಷಯದ ಕುರಿತು ಚರ್ಚಿಸುವ ಬಗ್ಗೆ.

**ನಿರ್ಣಯ:** ಹಣಕಾಸು ಅಧಿಕಾರಿಯವರು 2023-24ನೇ ಮತ್ತು 2024-25 ಸಾಲಿನ (ಏಪ್ರಿಲ್ 2024 ರಿಂದ ಸಪ್ಟೆಂಬರ್ 2024) ಸಾಲಿನ ಆದಾಯ ಮತ್ತು ಖರ್ಚಿನ, ಅನುದಾನ ಹಾಗೂ ಆರ್ಥಿಕ ಸವಾಲುಗಳ ವಿವರಗಳನ್ನು ಪಿಪಿಟಿ ಮೂಲಕ ಪ್ರದರ್ಶಿಸಿ ಸಭೆಗೆ ವಿವರಣೆ ನೀಡಿದರು. ಸದಸ್ಯರುಗಳಿಂದ ಬಂದ ಸಲಹೆಗಳನ್ನು ಗಮನಿಸಿ ಈ ಕೆಳಗಿನಂತೆ ನಿರ್ಣಯ ಕೈಗೊಳ್ಳಲಾಯಿತು.

1) ಮಾನ್ಯ ಸಿಂಡಿಕೇಟು ಸದಸ್ಯರಾದ, ಶ್ರೀ ಸಿ.ಎ. ನಿತಿನ್ ಜೆ. ಶೆಟ್ಟಿ ಇವರು ವಿಶ್ವವಿದ್ಯಾನಿಲಯದ ಹಣಕಾಸು ಕಛೇರಿಯ ಆರ್ಥಿಕ ವಹಿವಾಟುಗಳನ್ನು ಶೀಘ್ರವಾಗಿ Double Entry System ನ್ನು ಅಳವಡಿಸಿಕೊಳ್ಳುವುದರಿಂದ, ಹಣಕಾಸು ವ್ಯವಹಾರಗಳ ಸ್ಥಿತಿಗತಿಗಳ ಅಂಕಿಅಂಶಗಳನ್ನು ಕ್ಷಿಪ್ರವಾಗಿ ಪಡೆಯಲು ಸಾಧ್ಯವಾಗುವುದೆಂದು ಸಲಹೆ ನೀಡಿದರು. ಸದರಿಯವರ ಸಲಹೆಯನ್ನು ಪರಿಗಣಿಸಿ ಹಣಕಾಸು ವಹಿವಾಟುಗಳ ದಾಖಲಾತಿಗಳನ್ನು ದಿನಾಂಕ 01.04.2024 ರಿಂದ ಅನ್ವಯವಾಗುವಂತೆ Double Entry System ನಲ್ಲಿ ಅಳವಡಿಸಲು ನಿರ್ಣಯಿಸಲಾಯಿತು ಹಾಗೂ ಇದಕ್ಕೆ ಅಗತ್ಯವಿರುವ Tally Software ನ್ನು ಖರೀದಿಸುವ / ಅಳವಡಿಸುವ ಪ್ರಕ್ರಿಯೆಗಳನ್ನು ಅನುಮೋದಿಸಲಾಯಿತು.

2) ವಿಶ್ವವಿದ್ಯಾನಿಲಯದ ಪಾವತಿಗಳನ್ನು ಆದಷ್ಟು ಶೀಘ್ರವಾಗಿ ಚೆಕ್ ಬದಲಾಗಿ ಸಂಪೂರ್ಣವಾಗಿ ಆನ್‌ಲೈನ್ ಮೂಲಕ ಪಾವತಿಸಲು ಕ್ರಮಕೈಗೊಳ್ಳಲು ನಿರ್ಣಯಿಸಲಾಯಿತು.
3) ಮಾನ್ಯ ಸಿಂಡಿಕೇಟು ಸದಸ್ಯರಾದ, ಡಾ. ಎಸ್.ಬಿ.ಎಂ. ಪ್ರಸನ್ನ ಮತ್ತು ಡಾ.ಕೆ.ಸಿ.ಮಹದೇಶ ಇವರು ವಿಶ್ವವಿದ್ಯಾನಿಲಯದ ಸಾಮಾನ್ಯ ನಿಧಿಯ ಪ್ರಮುಖ ನಾಲ್ಕು ಬ್ಯಾಂಕ್ ಖಾತೆಗಳಲ್ಲಿರುವ ಹಣದ ವಿವರಗಳನ್ನು ಕೋರಿದರು. ಈ ಬಗ್ಗೆ ವಿವರಗಳನ್ನು ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.
4) ಮಾನ್ಯ ಸಿಂಡಿಕೇಟು ಸದಸ್ಯರಾದ ಡಾ.ಕೆ.ಸಿ.ಮಹದೇಶ ಇವರು, ಅತಿಥಿ ಉಪನ್ಯಾಸಕರು, ತಾತ್ಕಾಲಿಕ ಸಿಬ್ಬಂದಿ ಹಾಗೂ ಹೊರಗುತ್ತಿಗೆ ನೌಕರರಿಗೆ ಪಾವತಿಗೆ ಬಾಕಿಯಿರುವ ವೇತನವನ್ನು ಕೂಡಲೇ ಪಾವತಿಸುವಂತೆ ಮನವಿ ಮಾಡಿದರು. ವೇತನ ಪಾವತಿಯನ್ನು ಆದ್ಯತೆ ನೆಲೆಯಲ್ಲಿ ಪರಿಗಣಿಸಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಎಸಿಸಿ: ವಿ.ಸ.4:2(2024)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಸಂಯೋಜಿತ/ಘಟಕ/ಸ್ವಾಯತ್ತ/ಕಾಲೇಜುಗಳ ಪ್ರಾಂಶುಪಾಲರ ಜೇಷ್ಠತಾ ಪಟ್ಟಿಯನ್ನು ಅನುಮೋದಿಸುವ ಬಗ್ಗೆ.

**ನಿರ್ಣಯ:** ತ:ಖ್ತೆಯಲ್ಲಿರುವ ಕ್ರಮ ಸಂಖ್ಯೆ 1 ರಿಂದ 159ರವರೆಗಿನ ಕಾಲೇಜುಗಳ ಪ್ರಾಂಶುಪಾಲರ ಜೇಷ್ಠತಾ ಪಟ್ಟಿಯನ್ನು ಅನುಮೋದಿಸಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ: ವಿ.ಸ.4:3(2024)

ವಿಷಯ: ಡಾ.ಡಿ.ಜೆ. ಮಾನಸ, ಸಹಾಯಕ ಪ್ರಾಧ್ಯಾಪಕರು, ಸಸ್ಯಶಾಸ್ತ್ರ ವಿಭಾಗ, ದಾವಣಗೆರೆ ವಿಶ್ವವಿದ್ಯಾನಿಲಯ ಇವರ ಅಂತರ್ ವಿಶ್ವವಿದ್ಯಾನಿಲಯ ವರ್ಗಾವಣೆಗೆ ಸಂಬಂಧಿಸಿ ವಿಶ್ವವಿದ್ಯಾನಿಲಯದ ಅಭಿಪ್ರಾಯ ನೀಡುವ ಬಗ್ಗೆ..

**ನಿರ್ಣಯ:** ಅನುಮೋದಿಸಲಾಯಿತು

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ: ವಿ.ಸ.4:4(2024)

ವಿಷಯ: ಶ್ರೀಮತಿ ಗೀತಾ ಕೆ., ಶೀಘ್ರಲಿಪಿಗಾರರು, ಮಂಗಳೂರು ವಿಶ್ವವಿದ್ಯಾನಿಲಯ ಇವರನ್ನು ಕರ್ನಾಟಕ ಸರ್ಕಾರ ಸಚಿವಾಲಯದಲ್ಲಿ ಖಾಲಿಯಿರುವ ಶೀಘ್ರಲಿಪಿಗಾರ ಹುದ್ದೆಗೆ ನಿಯೋಜಿಸಿರುವುದನ್ನು ಒಪ್ಪಂದದ ಆಧಾರದ ನೇಮಕಾತಿ ಎಂದು ಪರಿಗಣಿಸುವ ಬಗ್ಗೆ.

**ನಿರ್ಣಯ:** ಶ್ರೀಮತಿ ಗೀತಾ ಇವರು 2017 ರಿಂದ ಪ್ರತಿನಿಯೋಜನೆಯಲ್ಲಿದ್ದು, ಪ್ರತಿನಿಯೋಜನಾ ಅವಧಿಯು ಈಗಾಗಲೇ ಮುಗಿದಿರುವುದರಿಂದ ಹಾಗೂ ಸದರಿಯವರ ಸೇವೆಯು ವಿಶ್ವವಿದ್ಯಾನಿಲಯಕ್ಕೆ ಅಗತ್ಯವಾಗಿರುವುದರಿಂದ ಇವರನ್ನು ಕೂಡಲೇ ಬಿಡುಗಡೆಗೊಳಿಸಿ ವಿಶ್ವವಿದ್ಯಾನಿಲಯದ ಕರ್ತವ್ಯಕ್ಕೆ ಹಾಜರಾಗಲು ಆದೇಶಿಸುವಂತೆ ಸರ್ಕಾರಕ್ಕೆ ಮತ್ತೊಮ್ಮೆ ಪತ್ರ ಬರೆಯಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಡಿಸಿ: ವಿ.ಸ.4:5(2024)

ವಿಷಯ: ಶೈ.ವ. 2025-26ನೇ ಸಾಲಿಗೆ ಹೊಸ/ವಿಸ್ತರಣಾ/ಮುಂದುವರಿಕೆ/ಶಾಶ್ವತ ಸಂಯೋಜನೆ / ಶಾಶ್ವತ ಸಂಯೋಜನೆಯ ಮುಂದುವರಿಕೆ ಸಂಯೋಜನೆ ಬಗ್ಗೆ ಕಾಲೇಜುಗಳ / ವಿದ್ಯಾಸಂಸ್ಥೆ ಪರಿಶೀಲನೆಗೆ ಸ್ಥಳೀಯ ವಿಚಾರಣಾ ಸಮಿತಿಯನ್ನು ರಚಿಸುವ ಬಗ್ಗೆ..

**ನಿರ್ಣಯ:** ಸ್ಥಳೀಯ ವಿಚಾರಣಾ ಸಮಿತಿಗಳನ್ನು ರಚಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ: ವಿ.ಸ.4:6(2024)

ವಿಷಯ: Proposed installation of lift for the Class room Complex building at Mangalagangothri Campus, Konaje in Mangalore Taluk Dakshina Kannada District - PM USHA Grant. Estimated Amount Rs.23.00 lakhs.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ: ವಿ.ಸ.4:7(2024)

ವಿಷಯ: Proposed Construction of toilet building for Health Centre at Mangalore University Campus - PM USHA Grant. Estimated Amount Rs. 11.00 lakhs.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ: ವಿ.ಸ.4:8(2024)

ವಿಷಯ: Construction of main gate for Administrative building at Mangalore University Campus - PM USHA. Estimated Amount Rs. 8.00 lakhs.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ: ವಿ.ಸ.4:9(2024)

ವಿಷಯ: Proposed building for Record Room for Administrative building at Mangalore University, Mangalagangothri - PM USHA Grant. Estimated Amount Rs. 24.00 lakhs..

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ: ವಿ.ಸ.4:10(2024)

ವಿಷಯ: Upgradation and maintenance of main Kitchen and Dinning block of Boys Hostel at Mangalore University Campus. Estimated Amount Rs. 37.00 lakhs.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ: ವಿ.ಸ.4:11(2024)

ವಿಷಯ: Providing and installing 100 KLD collective Sewage Treatment Plant System along with underground drainage arrangement to the Working Women's Hostel and Ladies Hostels at Mangalore University, Mangalagangothri. Estimated Amount Rs. 1.10 crores.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ: ವಿ.ಸ.4:12(2024)

ವಿಷಯ: Costruction of 35,000.00 ltrs. Capacity Overhead Tank at Working Women's Hostel premise in Mangalore University Campus. Mangalagangothri – PM USHA Grant. Estimated Amount Rs. 32.00 lakhs.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ: ವಿ.ಸ.4:13(2024)

ವಿಷಯ: Necessary repairs and maintenance to "E" type quarters block number 1 & 6 and providing sheet roofing to the stair portion of "D" type quarters block No. D1 to D8 & E Type Quarters block No. E2 to E4 at Mangalore University Campus, Mangalagangothri – PM USHA Grant. Estimated Amount Rs. 64.00 Lakhs.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ: ವಿ.ಸ.4:14(2024)

ವಿಷಯ: Installation of Double pole Structure and Group operating switch at Nanda Deepa and Jnana Deepa power station, Mangalore University – ಟೆಂಡರು ಅಂಗೀಕರಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ: ವಿ.ಸ.4:15(2024)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ವಿವಿಧ ವಿಭಾಗಗಳ ಕಟ್ಟಡಗಳ ಮೇಲ್ಛಾವಣಿಗಳ ಮೇಲೆ ಅಳವಡಿಸಲಾಗಿರುವ Solar Roof top photo voltic project (S.R.T.P.V.)ನ Solar Power Generation ಗೆ ಸಂಬಂಧಿಸಿದ ಬಿಲ್ಲಿನ ಪಾವತಿಯ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ: ವಿ.ಸ.4:16(2024)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ ನಿರ್ವಹಿಸಲಾದ ಕಾಮಗಾರಿಗಳ ಭದ್ರತಾ ಠೇವಣಿಯನ್ನು ಗುತ್ತಿಗೆದಾರರ ವಾರಿಸುದಾರರಿಗೆ ಬಿಡುಗಡೆಗೊಳಿಸುವ ಬಗ್ಗೆ.

**ನಿರ್ಣಯ:** ಕುಲಸಚಿವರು ನಿಯಮಾನುಸಾರ ಕ್ರಮಕೈಗೊಳ್ಳಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ: ವಿ.ಸ.4:17(2024)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಆವರಣಕ್ಕೆ ಸಂಬಂಧಿಸಿದ ಗುತ್ತಿಗೆ ಕಾಮಗಾರಿಗಳಲ್ಲಿ ದಿನಾಂಕ 18.07.2022 ರಿಂದ ಅನ್ವಯವಾಗುವಂತೆ ಪರಿಷ್ಕೃತ ಜಿ.ಎಸ್.ಟಿ. ಯಿಂದಾಗಿ ರೂ. 5.00 ಲಕ್ಷ ಮೀರಿದ ಪ್ರಸ್ತುತ ಚಾಲ್ತಿಯಲ್ಲಿರುವ 2021-22 ದರಪಟ್ಟಿಯಂತೆ ತಯಾರಿಸಲಾದ ಪರಿಷ್ಕೃತ ಅಂದಾಜುಪಟ್ಟಿ ಹಾಗೂ ಟೆಂಡರು ಕಾಮಗಾರಿಗಳಿಗೆ ಯಥಾಸ್ಥಿತಿಯಲ್ಲಿ ಅನುಮೋದನೆ ನೀಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ: ವಿ.ಸ.4:18(2024)

ವಿಷಯ: Estimate for the Proposed Construction of Building for Centre of Excellence in Generative Artificial Intelligence and Deep Learning for Mangalore University, Mangalagangothri at Konaje, Mangalore - PM USHA Grant. Estimated Amount Rs. 7.69 Crores.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ: ವಿ.ಸ.4:19(2024)

ವಿಷಯ: Renovation of “B” type Staff Quarter’s at Mangalore University Campus, Mangalagangothri - PM USHA Grant. Estimated Amount Rs.30.00 lakhs.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಇಡಿ: ವಿ.ಸ.4:20(2024)

ವಿಷಯ: Consturction of Ladies Hostel for SC/ST Students under AICTE-CAFES Scheme at Mangalore University Campus, Mangalagangothri - ಕಾಲಾವಧಿ ವಿಸ್ತರಣೆ.

**ನಿರ್ಣಯ:** ಕಾಲಾವಧಿಯನ್ನು ವಿಸ್ತರಿಸಲು ನಿರ್ಣಯಿಸಲಾಯಿತು. ಪರಿಶಿಷ್ಟ ಜಾತಿ / ಪರಿಶಿಷ್ಟ ಪಂಗಡ ವಿದ್ಯಾರ್ಥಿನಿಯರಿಗಾಗಿ ನಿರ್ಮಿಸಿರುವ ಸದರಿ ವಸತಿಗೃಹ ಬಳಕೆಗೆ ಯೋಗ್ಯವಾಗಿಸಲು ಅವಶ್ಯವಿರುವ ಸೌಲಭ್ಯಗಳನ್ನು ಪೂರೈಸಲು ಅಗತ್ಯವಿರುವ ಅನುದಾನದ ಬೇಡಿಕೆಗಾಗಿ ವಿವಿಧ ಸಂಸ್ಥೆಗಳ CSR ನಿಧಿಯನ್ನು ಮಂಜೂರು ಮಾಡುವಂತೆ ಕೋರಿ ಸಂಬಂಧಿಸಿದವರಿಗೆ ಮನವಿ ಮಾಡಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಪರೀಕ್ಷಾಂಗ: ವಿ.ಸ.4:21(2024)

ವಿಷಯ: ಪರೀಕ್ಷಾಂಗ ವಿಭಾಗದ Workstation/Computer and Laptop ಖರೀದಿಗೆ ಪಾವತಿ ಬಗ್ಗೆ..

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ: ವಿ.ಸ.4:22(2024)

ವಿಷಯ: Consultancy ಕಾರ್ಯವನ್ನು ಒದಗಿಸಿದ ಬಿಲ್ಲಿಗೆ ಮಂಜೂರಾತಿ ನೀಡುವ ಬಗ್ಗೆ..

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಆಡಳಿತ: ವಿ.ಸ.4:23(2024)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ಕಛೇರಿ/ಸ್ನಾತಕೋತ್ತರ ವಿಭಾಗಗಳು ಹಾಗೂ ಘಟಕ ಕಾಲೇಜುಗಳಿಗೆ ಅಗತ್ಯವಿರುವ ಕಂಪ್ಯೂಟರ್ ಪ್ರಿಂಟರ್‌ಗಳ ಟೋನರ್ ರೀಫಿಲ್ಲಿಂಗ್ ಹಾಗೂ ಡ್ರಮ್ ಬದಲಾವಣೆ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು. ಅನುಸರಣಾ ವರದಿ ಸಲ್ಲಿಸುವಾಗ ವಾರ್ಷಿಕ ಅಂದಾಜು ವೆಚ್ಚವನ್ನು ನಮೂದಿಸಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಪರೀಕ್ಷಾಂಗ: ವಿ.ಸ.4:24(2024)

ವಿಷಯ: 2024ನೇ ಸಾಲಿನ ಪದವಿ/ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ ಬೇಕಾದ ಉತ್ತರ ಪತ್ರಿಕೆಗಳನ್ನು ವಿದ್ಯುನ್ಮಾನ ಸಂಗ್ರಹಣ ವಿಧಾನದ ಇ-ಟೆಂಡರು ಮೂಲಕ ಖರೀದಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು. ಮಾನ್ಯ ಸದಸ್ಯರಾದ ಡಾ.ಕೆ.ಸಿ. ಮಹದೇಶ ಇವರು ಇನ್ನು ಮುಂದೆ ಪರೀಕ್ಷಾ ಕಾರ್ಯಗಳಿಗೆ ಅಗತ್ಯವಿರುವ ಉತ್ತರ ಪತ್ರಿಕೆ / ಲೇಖನ ಸಾಮಾಗ್ರಿಗಳ ಖರೀದಿಯ ಮಂಜೂರಾತಿಯನ್ನು ಘಟನೋತ್ತರವಾಗಿ ಮಂಡಿಸದೆ, ಖರೀದಿ ಪ್ರಕ್ರಿಯೆಯನ್ನು ಸಾಕಷ್ಟು ಮುಂಚಿತವಾಗಿ ಪ್ರಾರಂಭಿಸಿ, ಸಿಂಡಿಕೇಟಿನ ಅನುಮೋದನೆಗೆ ಮಂಡಿಸುವಂತೆ ಸಲಹೆ ನೀಡಿದರು.

ಕಾರ್ಯಸೂಚಿ ಸಂಖ್ಯೆ: ಪರೀಕ್ಷಾಂಗ: ವಿ.ಸ.4:25(2024)

ವಿಷಯ: 2024-25ನೇ ಸಾಲಿನ ಸ್ನಾತಕ/ಸ್ನಾತಕೋತ್ತರ ಪದವಿ ಪರೀಕ್ಷೆಗಳಿಗೆ ಸಂಬಂಧಪಟ್ಟಂತೆ ಬೇಕಾದ ಪರೀಕ್ಷಾ ನಮೂನೆ/ಲಕೋಟೆ/ಲೇಖನ ಸಾಮಾಗ್ರಿಗಳನ್ನು ವಿದ್ಯುನ್ಮಾನ ಸಂಗ್ರಹಣ ವಿಧಾನದ ಇ-ಟೆಂಡರು ಮೂಲಕ ಖರೀದಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ: ವಿ.ಸ.4:26(2024)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಗ್ರಂಥಾಲಯಕ್ಕೆ ಅಗತ್ಯವಿರುವ Software for remote Access Facility ಖರೀದಿಗೆ ಅನುಮೋದನೆ ನೀಡುವ ಬಗ್ಗೆ..

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಾರ್ವತ್ರಿಕ: ವಿ.ಸ.4:27(2024)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಹಾಗೂ ಘಟಕ ಕಾಲೇಜುಗಳಲ್ಲಿ ಹೊರಗುತ್ತಿಗೆ ಆಧಾರದಲ್ಲಿ ಭದ್ರತಾ ವ್ಯವಸ್ಥೆಗೆ ಸಿಬ್ಬಂದಿಗಳನ್ನು ಪಡೆದುಕೊಳ್ಳುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ: ವಿ.ಸ.4:28(2024)

ವಿಷಯ: ಪ್ರಸಾರಾಂಗ, ಮಂಗಳೂರು ವಿಶ್ವವಿದ್ಯಾನಿಲಯ - ಪದವಿ (ಮೊದಲನೇ ಚತುರ್ಮಾಸ) ಪಠ್ಯಪುಸ್ತಕಗಳನ್ನು ಮುದ್ರಿಸುವ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ: ವಿ.ಸ.4:29(2024)

ವಿಷಯ: ಕೋಲಾರ-ಚಿಕ್ಕಬಳ್ಳಾಪುರ ಜಿಲ್ಲಾ ಸಹಕಾರ ಹಾಲು ಉತ್ಪಾದಕರ ಸಂಘ ನಿಯಮಿತ (ಕೋಚಿಮುಲ್) ಇಲ್ಲಿನ ಉದ್ಯೋಗಿಗಳ ನೇಮಕಾತಿ - ಮಂಗಳೂರು ವಿಶ್ವವಿದ್ಯಾನಿಲಯದಿಂದ ನಡೆಸಲಾದ ಪರೀಕ್ಷೆಗಳಲ್ಲಿ ಅಕ್ರಮ ನಡೆದಿದೆ ಎನ್ನಲಾದ ಬಗ್ಗೆ ತನಿಖೆ ನಡೆಸಲು ರಚಿಸಲಾದ ಸಮಿತಿಯು ಸಲ್ಲಿಸಿರುವ ವರದಿಯ ಬಗ್ಗೆ.

**ನಿರ್ಣಯ:** ತನಿಖಾ ಸಮಿತಿಯ ವರದಿಯನ್ನು ಅನುಮೋದಿಸಲಾಯಿತು ಹಾಗೂ ಸದರಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲು ನಿರ್ಣಯಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ: ವಿ.ಸ.4:30(2024)

ವಿಷಯ: CARER ಕೇಂದ್ರದ ಪ್ರಯೋಗಾಲಯಕ್ಕೆ ಅಗತ್ಯವಿರುವ ವಿಶೇಷ ಗ್ಲಾಸ್‌ವೇರ್‌ಗಳನ್ನು ಖರೀದಿಸುವ ಇಂಡೆಂಟಿಗೆ ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ: ವಿ.ಸ.4:31(2024)

ವಿಷಯ: Quartz Furnance ಉಪಕರಣವನ್ನು ಖರೀದಿಸುವ ಇಂಡೆಂಟಿಗೆ ಮಂಜೂರಾತಿ ನೀಡುವ ನೀಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ: ವಿ.ಸ.4:32(2024)

ವಿಷಯ: CARER ಕೇಂದ್ರದಲ್ಲಿರುವ Radon Calibration Chamber ಉಪಕರಣದ Comprehensive ವಾರ್ಷಿಕ ನಿರ್ವಹಣೆಯನ್ನು ನಿರ್ವಹಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ: ವಿ.ಸ.4:33(2024)

ವಿಷಯ: SERB ಪ್ರಾಜೆಕ್ಟ್, ಭೌತಶಾಸ್ತ್ರ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರಿಗೆ ಪ್ರಾಜೆಕ್ಟ್‌ಗೆ ಅಗತ್ಯವಿರುವ Potentistat/Galvanostat for Supercapacitor & Sensor Measurement with Accessories ನ್ನು ಖರೀದಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಡಿಇವಿ: ವಿ.ಸ.4:34(2024)

ವಿಷಯ: Ozone Generator along with Oxygen Concentrator ಉಪಕರಣವನ್ನು ಖರೀದಿಸುವ ಇಂಡೆಂಟಿಗೆ ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ: ವಿ.ಸ.4:35(2024)

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ನೇರ ನೇಮಕಾತಿಯಡಿ ಖಾಲಿಯಿದ್ದ ಬ್ಯಾಕ್‌ಲಾಗ್ ಹುದ್ದೆಗಳನ್ನು ಭರ್ತಿಗೊಳಿಸುವ ಬಗ್ಗೆ.

**ನಿರ್ಣಯ:** ನೇಮಕಾತಿ ಸಮಿತಿಯ ಶಿಫಾರಸ್ಸುಗಳನ್ನು ಅಂಗೀಕರಿಸಲಾಯಿತು. ಆಯ್ಕೆಗೊಂಡ ಅಭ್ಯರ್ಥಿಗಳ ಪಟ್ಟಿಯನ್ನು ವಿಶ್ವವಿದ್ಯಾನಿಲಯದ ವೆಬ್‌ಸೈಟ್‌ನಲ್ಲಿ ಪ್ರಕಟಿಸಿ, ಆಕ್ಷೇಪಣೆಗಳಿದ್ದಲ್ಲಿ ಪರಿಶೀಲಿಸಿ, ನೇಮಕಾತಿ ಪಟ್ಟಿಯನ್ನು ಸರ್ಕಾರದ ಅನುಮೋದನೆಗೆ ಸಲ್ಲಿಸಲು ನಿರ್ಣಯಿಸಲಾಯಿತು.

**ಇತರೆ ವಿಷಯಗಳು:**

1) ಮಾನ್ಯ ಸಿಂಡಿಕೇಟು ಸದಸ್ಯರಾದ ಡಾ.ಕೆ.ಸಿ.ಮಹದೇಶ ಇವರು, ಶುಲ್ಕ ಪರಿಷ್ಕರಣೆ ಮಾಡುವಾಗ ಸಿಂಡಿಕೇಟಿನಲ್ಲಿ ಚರ್ಚಿಸಿ ಸಲಹೆ ಪಡೆದು ನಿರ್ಣಯಿಸುವಂತೆ ಪ್ರಸ್ತಾಪಿಸಿದರು. ಈ ಬಗ್ಗೆ ಇನ್ನು ಮುಂದೆ ವಿಶ್ವವಿದ್ಯಾನಿಲಯದ ಶುಲ್ಕ ಪರಿಷ್ಕರಣೆ ಪೂರ್ವದಲ್ಲಿ ಸಿಂಡಿಕೇಟಿನ ಸಲಹೆ ಪಡೆದು ಶುಲ್ಕ ಪರಿಷ್ಕರಿಸಲು ನಿರ್ಣಯಿಸಲಾಯಿತು.

2) ಮಾನ್ಯ ಸದಸ್ಯರಾದ ಡಾ.ಎಸ್.ಬಿ.ಎಂ.ಪ್ರಸನ್ನ ಇವರು, ನಿವೃತ್ತ ನ್ಯಾಯಮೂರ್ತಿಯವರ ಅಧ್ಯಕ್ಷತೆಯಲ್ಲಿ ನಡೆದ ತನಿಖೆಯ ಖರ್ಚು ವೆಚ್ಚದ ಬಗ್ಗೆ ಮಾಹಿತಿಯನ್ನು ಕೋರಿದರು. ಸದರಿ ಮಾಹಿತಿಯನ್ನು ಹಣಕಾಸು ಅಧಿಕಾರಿಯವರು ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸುವಂತೆ ನಿರ್ಣಯಿಸಲಾಯಿತು.

3) ಲೆಕ್ಕ ಪರಿಶೋಧಕರು ವಸೂಲಾತಿಗೆ ಸೂಚಿಸಿರುವ ಮೊತ್ತವನ್ನು ವಸೂಲಿ ಮಾಡುವ ಬಗ್ಗೆ ನಿಯಮಾನುಸಾರ ಅಗತ್ಯ ಕ್ರಮಕೈಗೊಳ್ಳುವಂತೆ ನಿರ್ಣಯಿಸಲಾಯಿತು.

4) ವಿದ್ಯಾರ್ಥಿಗಳಿಗೆ ಅಂಕಪಟ್ಟಿಯನ್ನು ನೀಡುವ ಬಗ್ಗೆ ಇರುವ ಸಮಸ್ಯೆಯ ಮಾಹಿತಿ ಸಿಂಡಿಕೇಟಿನ ಗಮನಕ್ಕೆ ಬಂದಿಲ್ಲವೆಂದು ಮಾನ್ಯ ಸಿಂಡಿಕೇಟು ಸದಸ್ಯರಾದ ಶ್ರೀ ಸುರೇಶ್ ಬಿ. ನಾವೂರು ಮತ್ತು ಶ್ರೀ ರಘುರಾಜ್ ಇವರು ಸಭೆಯ ಗಮನವನ್ನು ಸೆಳೆದರು. ಮಾನ್ಯ ಕುಲಪತಿಯವರು UUCMS Portal ನಲ್ಲಿ ವಿದ್ಯಾರ್ಥಿಗಳ ಅಂಕಪಟ್ಟಿ ವಿತರಣೆಯಲ್ಲಿ ಉಂಟಾಗಿರುವ ದೋಷದ ಬಗ್ಗೆ ಹಲವಾರು ಬಾರಿ ಸರ್ಕಾರದ ಗಮನಕ್ಕೆ ತರಲಾಗಿದ್ದು, ರಾಜ್ಯದ ಇತರೇ ವಿಶ್ವವಿದ್ಯಾನಿಲಯಗಳಲ್ಲಿಯೂ ಸಹ ಇದೇ ರೀತಿಯ ಸಮಸ್ಯೆ ಕಾಡುತ್ತಿದೆ. ಈ ಸಮಸ್ಯೆಗೆ UUCMS ನಿಂದಲೇ ವಿಶ್ವವಿದ್ಯಾನಿಲಯಗಳು ಪರಿಹಾರವನ್ನು ಕಾಣಬೇಕಾಗಿದೆಯೇ ಹೊರತು, ವಿಶ್ವವಿದ್ಯಾನಿಲಯ ಆಂತರಿಕವಾಗಿ ಬಗೆಹರಿಸಲು ಅಸಾಧ್ಯವೆಂಬುದನ್ನು ಸಭೆಯ ಗಮನಕ್ಕೆ ತಂದರು. ಈ ಸಮಸ್ಯೆ ನಿವಾರಣೆ ಬಗ್ಗೆ ನಿರಂತರವಾಗಿ ಸಂಬಂಧಿಸಿದ ಇಲಾಖೆಯ ಅಧಿಕಾರಿಗಳ ಗಮನಕ್ಕೆ ತರಲಾಗುತ್ತಿದ್ದು ಸಮಸ್ಯೆಯ ಪರಿಹಾರದ ಬಗ್ಗೆ ವಿಶ್ವಾಸವನ್ನು ವ್ಯಕ್ತಪಡಿಸಿದರು.

5) ಮಾನ್ಯ ಸದಸ್ಯರಾದ ಡಾ.ಕೆ.ಸಿ. ಮಹದೇಶ ಇವರು, ವಿಶ್ವವಿದ್ಯಾನಿಲಯದ ವತಿಯಿಂದ ನಡೆಸುವ ಯಾವುದೇ ಬಾಹ್ಯ ನೇಮಕಾತಿ ಪರೀಕ್ಷೆಗಳನ್ನು ಗೌಪ್ಯತೆಯಿಂದ ಹಾಗೂ ಹಣಕಾಸು ವ್ಯವಹಾರಗಳನ್ನು ಪಾರದರ್ಶಕತೆಯಿಂದ ನಡೆಸುವಂತೆ ಪ್ರಸ್ತಾಪಿಸಿದರು. ಇದಕ್ಕೆ ಮಾನ್ಯ ಸದಸ್ಯರಾದ ಶ್ರೀ ಸುರೇಶ್ ಬಿ. ನಾವೂರು ಹಾಗೂ ಶ್ರೀ ರಘುರಾಜ್ ಇವರು ತಮ್ಮ ಸಹಮತವನ್ನು ವ್ಯಕ್ತಪಡಿಸಿದರು. ಮಾನ್ಯ ಸದಸ್ಯರಾದ ಡಾ.ಎಸ್.ಬಿ.ಎಂ. ಪ್ರಸನ್ನ ಇವರು ಮುಂದಿನ ದಿನಗಳಲ್ಲಿ ಇಂತಹ ಬಾಹ್ಯ ಪರೀಕ್ಷೆಗಳನ್ನು ನಡೆಸುವಾಗ ಸಿಂಡಿಕೇಟು ಸಭೆಯಲ್ಲಿ ಮಂಡಿಸಿ ಮೂರು ಮಂದಿ ಹಿರಿಯ ಪ್ರಾಧ್ಯಾಪಕರ ನೇತೃತ್ವದ ಸಮಿತಿ ರಚಿಸಿ, ಪರೀಕ್ಷಾ ಉಸ್ತುವಾರಿಯನ್ನು ನಿರ್ವಹಿಸುವಂತೆ ನೀಡಿದ ಸಲಹೆಯನ್ನು ಅನುಮೋದಿಸಲಾಯಿತು.

6) ಡೀನ್ ನೆಲೆಯಲ್ಲಿ ಸಿಂಡಿಕೇಟು ಸದಸ್ಯರಾಗಿ ನಾಮನಿರ್ದೇಶನಗೊಂಡಿದ್ದ ಪ್ರೊ.ಎಂ. ಜಯಶಂಕರ್, ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ ಹಾಗೂ ಸೂಕ್ಷ್ಮಾಣು ಜೀವವಿಜ್ಞಾನದ ಹಿರಿಯ ಪ್ರಾಧ್ಯಾಪಕರು ಇವರ ಸದಸ್ಯತ್ವದ ಅವಧಿಯು ಈ ತಿಂಗಳ ಕೊನೆಗೆ ಪೂರ್ಣಗೊಳ್ಳುತ್ತಿರುವ ಹಿನ್ನೆಲೆಯಲ್ಲಿ ಮಾನ್ಯ ಕುಲಪತಿಯವರು ಸದರಿಯವರು ನೀಡಿದ ರಚನಾತ್ಮಕ ಸಲಹೆ ಮತ್ತು ಸಹಕಾರಗಳನ್ನು ಶ್ಲಾಘಿಸಿದರು.

**ಕುಲಸಚಿವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನು ಅರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.**

| | |
|---|---|
| **ಸಹಿ/-** | **ಸಹಿ/-** |
| **ಕುಲಸಚಿವರು** | **ಕುಲಪತಿಯವರು** |